# 2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.

## ಎಸ್.ಸಿ. ನಂ:- 167/2019

ಪಿಡಬ್ಲ್ಯೂ : 6
ಸಿಡಬ್ಲ್ಯೂ : 7

| | | |
|---|---|---|
| ಸಾಕ್ಷಿದಾರರ ಹೆಸರು | :: | ಸವಿತ |
| ಗಂಡನ ಹೆಸರು | :: | ಕುಮಾರ |
| ವಯಸ್ಸು | :: | 36 ವರ್ಷ |
| ವೃತ್ತಿ | :: | ವ್ಯವಸಾಯ |
| ವಾಸ | :: | ಜೈನಹಳ್ಳಿ |

ದಿನಾಂಕ 16-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಸರ್ಕಾರಿ ಅಭಿಯೋಜಕರಿಂದ:-

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನ್ನ ತಂದೆಯವರ ಅಕ್ಕ ಮತ್ತು 2 ನೇ ಆರೋಪಿಯು ನನ್ನ ಅಕ್ಕನ ಗಂಡ. ನನ್ನ ಅಕ್ಕನ ಹೆಸರು ಲಕ್ಷ್ಮೀ. ಆಕೆಯು ಮದುವೆಯಾಗಿ ಸುಮಾರು 20 ರಿಂದ 25 ವರ್ಷ ವಯಸ್ಸಾಗಿರುತ್ತದೆ. ಅವರಿಗೆ ಇಬ್ಬರು ಮಕ್ಕಳಿದ್ದು, ಅವರೆಂದರೆ ಜಲ್ಯ ಮತ್ತು ಜಲನ್.

ಮೊದಲು ನನ್ನ ಅಕ್ಕ ಮತ್ತು ಭಾವ ಚೆನ್ನಾಗಿದ್ದರು ಆ ನಂತರ ಅವರ ನಡವೆ ಜಗಳ ಪ್ರಾರಂಭವಾಯಿತು. 2 ನೇ ಆರೋಪಿಯು ಕೊಪ್ಪದಲ್ಲಿ ವಾಸವಾಗಿದ್ದ. ನನ್ನ ಅಕ್ಕ 2 ನೇ ಆರೋಪಿಗೆ ಆಕೆಯ ಮಕ್ಕಳನ್ನು ನೋಡಿಕೊಳ್ಳುವವರು ಯಾರೂ ಇಲ್ಲ ಮತ್ತು ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ಮತ್ತು 2 ನೇ ಆರೋಪಿಯು ಕೊಪ್ಪದಲ್ಲಿ ಇರುತ್ತಾರೆಂದು ಆಕೆಯ ಗಂಡನ ಬಳಿ ಹೇಳುತ್ತಿದ್ದರು. 1 ನೇ ಆರೋಪಿಯು ನನ್ನ ಅಕ್ಕನಿಗೆ ಆಕೆಯ ಮಗನಲ್ಲದೇ ಬೇರೆ ಯಾರು ನೋಡಿಕೊಳ್ಳುತ್ತಾರೆಂದು ಸ್ವಲ್ಪ ಬೈದಳಂತೆ. ನನ್ನ ಅಕ್ಕನಿಗೆ ಬೇಜಾರಾಗಿ ಆಕೆಯು ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳು. ನನ್ನ ಅಕ್ಕನನ್ನು ಹೊಳೆನರಸೀಪುರದಿಂದ ಹಾಸನದ ಆಸ್ಪತ್ರೆಗೆ ನಂತರ ಮೈಸೂರಿಗೆ ಕರೆದುಕೊಂಡು ಹೋದರು. ಅಲ್ಲಿ ಆಕೆಯು 14 ದಿವಸ ಇದ್ದು ನಂತರ ತೀರಿಕೊಂಡರು. ಆ ನಂತರ ಪೋಲೀಸರು ಬಂದು ಸಹಿ ತೆಗೆದುಕೊಂಡಿದ್ದಾರೆ. ಈಗ ತೋರಿಸಿದ ದಾಖ್ಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿದ ದಾಖ್ಲೆಯನ್ನು ನಿಪಿ 12 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಎಸ್ ಕೆ ವಕೀಲರಿಂದಃ**

2 ನೇ ಆರೋಪಿಯು ನನ್ನ ಅಕ್ಕನನ್ನು ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ಅವರು ಒಂದು ದಿವಸ ಕಳೆದು ಫೋನ್ ಮಾಡಿದರೂ ಬರಲಿಲ್ಲ. ಒಂದು ದಿವಸ ಆದ ಮೇಲೆ ಬಂದರು. ಈಗ ನಾನು ಗುರುತಿಸಿದ ದಾಖ್ಲೆಯ ಸಹಿ ನಾನು ಮೈಸೂರಿನಲ್ಲಿ ಮಾಡಿದ್ದೇನೆ. ನಾನು ಸಹಿ ಮಾಡಿರುವ ದಾಖ್ಲೆಯಲ್ಲಿ ಬರವಣಿಗೆ ಇತ್ತು ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತು. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿಲ್ಲ ಆದರೆ ಘಟನೆ ಬಗ್ಗೆ ನನ್ನ ಬಳಿ ವಿಚಾರಿಸಿದ್ದಾರೆ. ನಾನು ದಾಖಲೆಗೆ ಸಹಿ ಮಾಡಿದಾಗ ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

**ಮರುವಿಚಾರಣೆಃ ಇಲ್ಲ**

*(ಸಾಕ್ಷಿಯ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

ಓ.ಹೇ.ಕೇ. ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.